## ಯಶಸ್ಸಿನ ಮೂರಕ್ಷರ

# ವಿಜಯ್

ವಿಜಯಾ ರೆಡ್ಡಿ (ಜುಲೈ 15, 1936 – ಅಕ್ಟೋಬರ್ 9, 2020) ಕನ್ನಡ ಚಿತ್ರರಸಿಕರಿಗೆ ಸ್ಮರಣೀಯ ಸಿನಿಮಾಗಳನ್ನು ನೀಡಿದ ನಿರ್ದೇಶಕ. 'ಭಕ್ತಪ್ರಹ್ಲಾದ'ದಂಥ ಪೌರಾಣಿಕ ಕಥನವನ್ನು ನಿರೂಪಿಸಿದ ಅವರು, ಕನ್ನಡಿಗರ ಭಾವಕೋಶದ ಸಿನಿಮಾಗಳಾದ 'ಮಯೂರ', 'ಗಂಧದಗುಡಿ'ಯ ಸೂತ್ರಧಾರರೂ ಹೌದು. ತೆರೆಯ ಮೇಲೆ ಏರಿಕೆ ಕ್ರಮದಲ್ಲಿ ಕಾಣಿಸುತ್ತಿದ್ದ 'ವಿಜಯ್' ಎನ್ನುವ ಹೆಸರು, ಆ ಸಿನಿಮಾದ ಯಶಸ್ಸಿನ ರುಜುವೂ ಹೌದು ಎನ್ನುವುದಕ್ಕೆ ಅವರ ನಿರ್ದೇಶನದ ಬಹುತೇಕ ಚಿತ್ರಗಳ ಯಶಸ್ಸೇ ನಿದರ್ಶನವಾಗಿದೆ. ಇಂಥ ಅಸಲಿ ಕಸುಬುದಾರನ ಕೊನೆಯ ಸಂದರ್ಶನವನ್ನು 'ಸುಧಾ'ಕ್ಕಾಗಿ ಮಾಡಿಕೊಟ್ಟಿದ್ದ ಪತ್ರಕರ್ತ **ಬೆಳಚಿಕ್ಕನಹಳ್ಳಿ ಶ್ರೀನಾಥ್,** ಇದೀಗ ವಿಜಯ್ ಸ್ಮರಣೆಯ ಬರಹವನ್ನು 'ಸುಧಾ' ಓದುಗರ ಮುಂದಿಟ್ಟಿದ್ದಾರೆ.



ಸಂಗ್ರಹ ಚಿತ್ರಗಳು: ನಾಗೇಶ್ ಕೋಲಾರ

ಜಗತ್ತಿನಲ್ಲಿ ಎರಡು ರೀತಿಯ ಸಾಧಕರಿರುತ್ತಾರೆ; ಒಂದು, ತಾವು ಕಲಾವಿದ, ಸಂಗೀತಗಾರ, ಆಟಗಾರ ಹೀಗೆ ಇಂಥದ್ದೇ ಕ್ಷೇತ್ರದಲ್ಲಿ ಕೆಲಸ ಮಾಡಬೇಕು, ಇಂಥದ್ದೇ ಆಗಬೇಕು ಎಂದು ಕನಸು ಕಂಡು, ಅದಕ್ಕಾಗಿ ಪಟ್ಟು ಹಿಡಿದು, ಶ್ರಮಿಸಿ ಆ ಕ್ಷೇತ್ರದಲ್ಲಿ ಉನ್ನತ ಮಟ್ಟ ಮುಟ್ಟುವುದು; ಎರಡನೆಯದು, ಆಕಸ್ಮಿಕವಾಗಿಯೋ ಅನಿವಾರ್ಯವಾಗಿಯೋ ಯಾವುದೋ ಒಂದು ಕ್ಷೇತ್ರಕ್ಕೆ ಅಡಿಯಿಟ್ಟು ತಮ್ಮ ಶಿಸ್ತು, ಶ್ರಮ ಹಾಗೂ ಬದ್ಧತೆಯಿಂದ ಆ ರಂಗದಲ್ಲಿ ದೊಡ್ಡ ಎತ್ತರಕ್ಕೆ ಏರುವುದು. ಕಳೆದ ವಾರ (ಅ. 9) ನಿಧನರಾದ ಕನ್ನಡದ ಪ್ರತಿಭಾಶಾಲಿ ನಿರ್ದೇಶಕ ವಿಜಯಾ ರೆಡ್ಡಿ ಎರಡನೆಯ ಗುಂಪಿಗೆ ಸೇರಿದವರು.

ಸಮೃದ್ಧಿ ಹಾಗೂ ಸೌಂದರ್ಯಕ್ಕೆ ಹೆಸರಾದ ಆಂಧ್ರಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆಯ ತಾಡೇಪಲ್ಲಿ ಗೂಡೇಂ ಎನ್ನುವ ಹಳ್ಳಿಯ ರೈತ ಕುಟುಂಬದಲ್ಲಿ ಹುಟ್ಟಿ ಬೆಳೆದ ವಿಜಯಾ ರೆಡ್ಡಿ, ತಮ್ಮ ಹತ್ತೊಂಬತ್ತನೆಯ ವಯಸ್ಸಿಗೆ ಮದ್ರಾಸ್ ರೈಲು ಹತ್ತಿದಾಗ ಅವರ ಮನಸ್ಸಲ್ಲಿದ್ದದ್ದು ಜೀವನೋಪಾಯಕ್ಕಾಗಿ ಯಾವುದಾದರೊಂದು ಕೆಲಸ ಹಿಡಿಯಬೇಕು ಎಂಬುದಷ್ಟೇ. ಊರಿನಲ್ಲಿ ನಡೆಯುತ್ತಿದ್ದ ನಾಟಕಗಳಲ್ಲಿ ಪಾರ್ಟು ಮಾಡುತ್ತಿದ್ದದ್ದು ಅವರನ್ನು ಕನ್ನಡ ಚಿತ್ರ ನಿರ್ದೇಶಕ ವಿಠಲಾಚಾರ್ಯ ಅವರ ಬಳಿಗೆ ಕರೆತಂದಿತ್ತು. ಅಲ್ಲಿ ಕೂಡ ಅವರಿಗೆ ಕೆಲಸ ಸಿಕ್ಕಿದ್ದು ನಿರ್ದೇಶನ ವಿಭಾಗದಲ್ಲಲ್ಲ; ಸಂಕಲನ ಸಹಾಯಕನಾಗಿ ಎಡಿಟಿಂಗ್ ವಿಭಾಗದಲ್ಲಿ; ನಂತರ ಸೆಟ್ ಬಾಯ್, ಕ್ಲಾಪ್ ಬಾಯ್ ಹೀಗೆ ಹಂತ ಹಂತವಾಗಿ ಬೆಳೆದು, ಸಹನಿರ್ದೇಶಕನ ಸ್ಥಾನಕ್ಕೇರಿದರು. ಆಗ ವಿಠಲಾಚಾರ್ಯ ಅವರ ಬಳಿ ಸಿದ್ದಲಿಂಗಯ್ಯ ಒಂದನೇ ಅಸೋಸಿಯೇಟ್